ಪ್ರತಿಬಿಂಬ

**PRATIBIMBA –Multidisciplinary Kannada Research Journal of IIMRD**
**ISSN: 2582-2284**
**Vol-6 Issue 3, November-December 2024, Pp.28-34**
**©*IIMRD*, Mysuru**

IIMRD JOURNALS
**www.iimrd.com**

# ಪುರುಷೋತ್ತಮ ಬಿಳಿಮಲೆ ಅವರ ಅಂಕಣ ಬರಹಗಳು

**ಅಮರನಾಥ್ ಎನ್**

ಸಂಶೋಧನಾ ವಿದ್ಯಾರ್ಥಿ, ಎಸ್.ಜೆ.ಬಿ.ಸಿ.ಎಂ.ಎಸ್. ಕನ್ನಡ ಸಂಶೋಧನಾ ಕೇಂದ್ರ, ಬಿ.ಜಿ.ಎಸ್. ಆರೋಗ್ಯ ಮತ್ತು ಶಿಕ್ಷಣ ನಗರ, ಕಂಗೇರಿ

**ಸಾರಾಂಶ: (Abstract)**

*ಆಧುನಿಕ ಕನ್ನಡ ಸಾಹಿತ್ಯದಲ್ಲಿ ಸೃಜನಶೀಲ ಸಾಹಿತ್ಯಕ್ಕಿಂತ ಭಿನ್ನವಾದ ಅಂಕಣ ಬರಹಗಳು ವಿಶೇಷ ಆಸಕ್ತಿಯನ್ನು ಮೂಡಿಸುತ್ತವೆ. ಓದುಗನನ್ನು ತನ್ನಡೆಗೆ ಸೆಳೆಯುವ ಶಕ್ತಿಯನ್ನು ಹೊಂದಿದೆ. ಇದರ ವ್ಯಾಪ್ತಿ ಹೆಚ್ಚಿನ ವಿಸ್ತಾರತೆಯನ್ನು ಹೊಂದಿದ್ದು, ಜಗತ್ತಿನ ಯಾವುದೇ ವಿಷಯಗಳು ವಸ್ತುವಾಗಿ ಚರ್ಚಿತವಾಗುತ್ತದೆ. ಈ ಕಾರಣದಿಂದ ಅಂಕಣ ಬರಹಗಳು ಹೆಚ್ಚಿನ ಓದುಗರನ್ನು ತಲುಪುತ್ತದೆ. ಇದರಿಂದ ಸಾಮಾಜಿಕ ವ್ಯವಸ್ಥೆಯಲ್ಲಿ ಆಗುವ–ಆಗಬೇಕಾಗಿರುವ ಸಮಸ್ಯೆಗಳು ಸ್ಪಂದನೆಗೆ ಒಳಗಾಗುತ್ತದೆ. ಈ ವಿಚಾರವಾಗಿ ಜನಪದ ವಿದ್ವಾಂಸರಾದ ಪುರುಷೋತ್ತಮ ಬಿಳಿಮಲೆಯವರು ಅಂಕಣ ಬರಹಗಳಲ್ಲಿ ತಮ್ಮ ಛಾಪನ್ನು ಮೂಡಿಸಿದ್ದಾರೆ. ಹೀಗೆ ಅಭಿವ್ಯಕ್ತವಾದ ಬರಹಗಳ ಉದ್ದೇಶವನ್ನು ಇಲ್ಲಿ ಸಂಕ್ಷಿಪ್ತವಾಗಿ ಗುರುತಿಸಲಾಗಿದೆ.*

**ಮುಖ್ಯಪದಗಳು (Keywords):** ಕನ್ನಡ ಸಾಹಿತ್ಯ, ಅಂಕಣ ಬರಹ, ಬಹುರೂಪ, ತುಳುಭಾಷೆ, ಜಾನಪದ, ಐತಿಹಾಸಿಕತೆ, ಸಂಸ್ಕೃತಿ ಭಿನ್ನತೆ

## ಪೀಠಿಕೆ

ಅಂಕಣ ಬರಹಗಳು ಪತ್ರಿಕಾ ಸಾಹಿತ್ಯದಲ್ಲಿ ತನ್ನದೇ ಆದ ವಿಶಿಷ್ಟ ಶೈಲಿಯನ್ನು ಹೊಂದಿವೆ. ನಿರ್ದಿಷ್ಟ ಪತ್ರಿಕೆಗಳಲ್ಲಿ ಅಥವಾ ನಿಯತಕಾಲಿಕೆಗಳಲ್ಲಿ ನಿಯಮಿತವಾಗಿ ಪ್ರಕಟವಾಗುವ ಲೇಖನಗಳನ್ನು “ಅಂಕಣ ಬರಹ” ಎಂದು ಕರೆಯಲಾಗುತ್ತದೆ. ಕನ್ನಡದಲ್ಲಿ 'ಅಂಕಣ' ಮತ್ತು 'ಅಂಕಣ ಸಾಹಿತ್ಯ' ಎಂಬ ಪರಿಕಲ್ಪನೆ ಇಂಗ್ಲಿಷ್ ಪತ್ರಿಕೋದ್ಯಮದ ಪ್ರಭಾವದಿಂದ ಉದ್ಭವಿಸಿದೆ. ಇಂಗ್ಲಿಷ್‌ನ "ಕಾಲಮ್" ಎಂಬ ಪದಕ್ಕೆ ಸಮಾನಾರ್ಥಕವಾಗಿ 'ಅಂಕಣ' ಎಂಬ ಪದ ಬಳಸಲಾಗಿದೆ.

ಅಂಕಣಕಾರರು ನಿರ್ದಿಷ್ಟ ವಿಷಯಗಳ ಕುರಿತು ತಮ್ಮ ವೈಯಕ್ತಿಕ ಚಿಂತನೆಯನ್ನು ಮತ್ತು ದೃಷ್ಟಿಕೋನವನ್ನು ನಿರಂತರವಾಗಿ ಪ್ರಸ್ತುತಪಡಿಸುತ್ತಾರೆ. ಅಂಕಣ ಬರಹದ ಪ್ರಮುಖ ಲಕ್ಷಣವೆಂದರೆ, ಸಮಕಾಲೀನ ವಿಷಯಗಳಿಗೆ ಅಂಕಣಕಾರನ ವಿಶಿಷ್ಟ ಚಿಂತನಾಶಕ್ತಿಯ ವಿನ್ಯಾಸ ಮತ್ತು ವೈಯಕ್ತಿಕ ಛಾಪನ್ನು

ನೀಡುವುದು. ಅಂಕಣ ಬರಹಗಳು ಓದುಗರಿಗೆ ಹೊಸ ಅಂಶಗಳನ್ನು, ವೈಚಾರಿಕತೆ ಮತ್ತು ಒಳನೋಟಗಳನ್ನು ಒದಗಿಸುತ್ತವೆ. ಇವು ಬರಹಗಾರನಿಗೆ ಸವಾಲಿನ ಕಾರ್ಯವಾಗಿದ್ದು, ಹೆಚ್ಚಿನ ಅಧ್ಯಯನ ಮತ್ತು ಚಿಂತನೆಯ ಅಗತ್ಯವಿರುತ್ತದೆ. ಸಮಕಾಲೀನ ವಿಷಯಗಳನ್ನು ಆಳವಾಗಿ ವಿಶ್ಲೇಷಿಸಿ, ಸ್ಪಷ್ಟ ಮತ್ತು ಆಕರ್ಷಕ ರೀತಿಯಲ್ಲಿ ಓದುಗರಿಗೆ ತಲುಪಿಸುವುದು ಅಂಕಣಕಾರನ ಮುಖ್ಯ ಶಕ್ತಿ.

ಈ ಶೈಲಿಯ ಒಂದು ಸ್ಪಷ್ಟ ಉದಾಹರಣೆಯನ್ನು ಪುರುಷೋತ್ತಮ ಬಿಳಿಮಲೆ ಅವರ ಅಂಕಣ ಬರಹಗಳಲ್ಲಿ ಕಾಣಬಹುದು. ಅವರ ಲೇಖನಗಳಲ್ಲಿ ಚಿಂತನಶೀಲತೆ, ವಿಶಿಷ್ಟತೆ, ಮತ್ತು ಓದುಗರನ್ನು ಆಕರ್ಷಿಸುವ ಶಕ್ತಿಯಿದೆ. ಪುರುಷೋತ್ತಮ ಬಿಳಿಮಲೆಯವರ ಅಂಕಣ ಬರಹಗಳ ಸಂಕಲನ ಕೃತಿಯನ್ನು ಅಧ್ಯಯನಕ್ಕೆ ಆಯ್ಕೆ ಮಾಡಲಾಗಿದೆ. 'ಬಹುರೂಪ' ಎಂಬ ಕೃತಿಯು ಅವರ ಅಂಕಣ ಬರಹಗಳ ಸಂಗ್ರಹವಾಗಿದೆ. ಈ ಕೃತಿಯಲ್ಲಿ ಅವರು ವಿಜಯ ಕರ್ನಾಟಕ, ಮುಂಗಾರು, ಪ್ರಜೆ, ಪ್ರಜಾವಾಣಿ, ಮತ್ತು ಇತರ ಪತ್ರಿಕೆಗಳಿಗೆ ಬರೆದ ಅಂಕಣ ಬರಹಗಳನ್ನು ಸಂಗ್ರಹಿಸಿ ಪ್ರಕಟಿಸಿದ್ದಾರೆ.

ಲೇಖನಗಳು ತಮ್ಮ ವಿಶೇಷವಾದ ವಸ್ತು ಮತ್ತು ನಿರೂಪಣಾ ಶೈಲಿಯ ಮೂಲಕ ಓದುಗರಿಗೆ ಹೊಸ ವಿಶ್ಲೇಷಣೆ ಮತ್ತು ಚಿಂತನೆಗಳನ್ನು ನೀಡುತ್ತವೆ. ಈ ಹಿನ್ನೆಲೆಯಲ್ಲಿ 'ಬಹುರೂಪ' ಕೃತಿಯನ್ನು ಅಧ್ಯಯನಕ್ಕೆ ಆಯ್ಕೆ ಮಾಡಲಾಗಿದೆ. ಈ ಕೃತಿಯಲ್ಲಿ ಭಾಷೆ, ಶಿಕ್ಷಣ, ದೇಶೀಯ ವಿಷಯಗಳು, ರಾಷ್ಟ್ರೀಯತೆಯ ಪರಿಕಲ್ಪನೆ, ಬದಲಾಗುತ್ತಿರುವ ಭಾಷಾ ಪ್ರಕ್ರಿಯೆ, ಮತ್ತು ಶಿಕ್ಷಣದ ರೂಪಾಂತರಗಳನ್ನು ಒಳಗೊಂಡ ವಿಶ್ಲೇಷಣೆಯನ್ನು ರಾಜ್ಯ ಮತ್ತು ದೇಶದ ಗಡಿಗಳ ಅಡಿಯಲ್ಲಿ ಮಾತ್ರ ಸೀಮಿತಗೊಳಿಸದೆ, ಹೊಸ ಪರಿಕಲ್ಪನೆಯ ಮೂಲಕ ವಿಸ್ತರತೆಯನ್ನು ಪಡೆದಿದೆ. ಈ ಮೂಲಕ ಸಾಹಿತ್ಯ ಮತ್ತು ಸಂಸ್ಕೃತಿಯನ್ನು ಮುಕ್ತ ಚರ್ಚೆಗೆ ತರುವ ಪ್ರಯತ್ನ ಬಿಳಿಮಲೆಯವರು ಮಾಡಿದ್ದಾರೆ. ಈ ಚರ್ಚೆಯ ಮೂಲಕ ಓದುಗರನ್ನು ಭೌತಿಕ ಸಂವಾದಕ್ಕೆ ಪ್ರೇರೇಪಿಸುವ ಆಶಯ ಈ ಕೃತಿಯಲ್ಲಿ ಸ್ಪಷ್ಟವಾಗಿ ಕಾಣಿಸುತ್ತದೆ. ಈ ದೃಷ್ಟಿಕೋನದಲ್ಲಿ ಪುರುಷೋತ್ತಮ ಬಿಳಿಮಲೆಯವರ ಅಂಕಣ ಬರಹಗಳನ್ನು ಇಲ್ಲಿ ಚರ್ಚಿಸಲಾಗಿದೆ.

'ಬಹುರೂಪ' ಕೃತಿಯು ಪುರುಷೋತ್ತಮ ಬಿಳಿಮಲೆಯವರ ಅಂಕಣ ಬರಹಗಳ ಸಂಕಲನವಾಗಿದೆ, ಇದರಲ್ಲಿ ಒಟ್ಟು 57 ಲೇಖನಗಳು ಒಳಗೊಂಡಿವೆ. ಈ ಬರಹಗಳನ್ನು ಐದು ವಿಭಾಗಗಳಾಗಿ ವಿಂಗಡಿಸಿ ಅಧ್ಯಯನ ಮಾಡಲಾಗಿದೆ.

**ಮೊದಲನೆಯ ವಿಭಾಗ**

ಈ ಭಾಗದಲ್ಲಿ ಅವರ ಜೀವನದ ಕೆಲವು ಅನುಭವಗಳನ್ನು ನೆನಪಿಗೆ ತರುತ್ತಾರೆ ಹಾಗೂ ದಕ್ಷಿಣ ಕನ್ನಡದ ಪ್ರಕೃತಿಯ ಮತ್ತು ಸಂಸ್ಕೃತಿಯ ನೆಲೆಯನ್ನು ಚಿತ್ರಿಸಿದ್ದಾರೆ. ಜೊತೆಗೆ, ತುಳು ಭಾಷೆ ಮತ್ತು ಯಕ್ಷಗಾನ ಕುರಿತು ವಿಶ್ಲೇಷಣೆಯನ್ನು ಮಾಡುತ್ತಾರೆ.

**ಎರಡನೆಯ ವಿಭಾಗ**

ಇಲ್ಲಿ ಕನ್ನಡ ಭಾಷೆಯ ದೇಶಿಯತೆ, ಪ್ರಸ್ತುತ ಸನ್ನಿವೇಶ, ಜಾನಪದ ಅಧ್ಯಯನ, ಮತ್ತು ಜಾತ್ರೆಗಳ ಆಚರಣೆಗಳು ಮುಂತಾದ ವಿಷಯಗಳನ್ನು ಆಳವಾಗಿ ಅಧ್ಯಯನ ಮಾಡಿದ್ದಾರೆ.

**ಮೂರನೆಯ ವಿಭಾಗ**

ಈ ವಿಭಾಗ ಜಾತೀಯತೆ, ಸಂಸ್ಕೃತಿ, ಮತ್ತು ಜೀವನದ ವೈವಿಧ್ಯತೆಗಳನ್ನು ಸಮುದಾಯದ ನೆಲೆಯಲ್ಲಿ ಅನಾವರಣಗೊಳಿಸುತ್ತಾ, ಅದರ ವೈರುಧ್ಯಗಳನ್ನು ತಿಳಿಸುತ್ತಾರೆ.

**ನಾಲ್ಕನೆಯ ವಿಭಾಗ**

ಪುರಾಣ, ಮೌಖಿಕ ಸಾಹಿತ್ಯ, ಮತ್ತು ಐತಿಹಾಸಿಕ ನೆಲೆಗಳ ಮೂಲಕ ಓದುಗರನ್ನು ಆಕರ್ಷಿಸುವ ಪ್ರಯತ್ನ ಈ ಭಾಗದಲ್ಲಿ ಮಾಡುತ್ತಾರೆ.

**ಐದನೆಯ ವಿಭಾಗ**

ಸಂಸ್ಕೃತಿಯ ವಿಭಿನ್ನ ರೂಪಗಳು ಮತ್ತು ಅವುಗಳ ಸೂಕ್ಷ್ಮತೆಯನ್ನು ಸ್ಪಷ್ಟಪಡಿಸುವ ಮೂಲಕ ಓದುಗರಿಗೆ ಹೊಸ ಚಿಂತನೆಗಳನ್ನು ಉಣಬಡಿಸುತ್ತಾರೆ.

ಹೀಗೆ ಅಂಕಣ ಬರಹಗಳಿಗೆ ಹೊಸ ರೂಪವನ್ನು ನೀಡುವ ಬಿಳಿಮಲೆಯವರು ಪ್ರತಿ ವಿಭಾಗದ ಮೂಲಕ, ದೀರ್ಘವಾದ ಒಳನೋಟಗಳನ್ನು ಒದಗಿಸುವ ಪ್ರಯತ್ನವನ್ನು ಯಶಸ್ವಿಯಾಗಿ ನಿರ್ವಹಿಸಿದ್ದಾರೆ. ಅವುಗಳಲ್ಲಿ ಕೆಲವನ್ನು ಈ ಲೇಖನದಲ್ಲಿ ಚರ್ಚಿಸಲಾಗಿದೆ.

**ತುಳುನಾಡಿನ ಪರಿಕಲ್ಪನೆ ಮತ್ತು ತುಳು ಭಾಷೆಯ ವೈಶಿಷ್ಟ್ಯತೆ**

ಪುರುಷೋತ್ತಮ ಬಿಳಿಮಲೆ ತಮ್ಮ ಲೇಖನದಲ್ಲಿ ತುಳುನಾಡಿನ ಪರಿಕಲ್ಪನೆಗೆ ಭೌಗೋಳಿಕ ಮತ್ತು ಸಾಂಸ್ಕೃತಿಕ ಚೌಕಟ್ಟನ್ನು ನೀಡುವ ಪ್ರಯತ್ನ ಮಾಡುತ್ತಾರೆ. ಅವರು ತುಳು ಎಂದರೆ ಕೇವಲ ಭಾಷೆಯ ಪರಿಕಲ್ಪನೆಗೆ ಸೀಮಿತವಲ್ಲದೆ, ಕಡಲು, ನದಿ, ಬೆಟ್ಟ, ಭೂತಾರಾಧನೆ, ಯಕ್ಷಗಾನ ಇತ್ಯಾದಿ ಸಾಂಸ್ಕೃತಿಕ ಅಂಶಗಳನ್ನು ಕೂಡ ಸೇರಿಸಿಕೊಳ್ಳುತ್ತಾರೆ. ಈ ಮೂಲಕ ತುಳು ಭಾಷೆಯೆಂದರೆ ಸಮಗ್ರ ಸಾಮೂಹಿಕ ಮೌಲ್ಯದ ಚೌಕಟ್ಟನ್ನು ಹೊಂದಿರುವ ಸಮುದಾಯದ ಸಂಸ್ಕೃತಿಯ ಪ್ರತಿಬಿಂಬ ಎಂದು ಪ್ರತಿಪಾದಿಸುತ್ತಾರೆ. ತುಳು – ತುಳುವ – ತುಳುನಾಡಿನ ಪರಿಕಲ್ಪನೆಗೆ ರೂಪ ನೀಡಲು ಆಧುನಿಕ ಮತ್ತು ಚಾರಿತ್ರಿಕ ಆಧಾರಗಳನ್ನು ಬಳಸಿಕೊಳ್ಳುವ ಬಿಳಿಮಲೆಯವರು ವಸಾಹತುಶಾಹಿ ಕಾಲದ ಮಿಷನರಿಗಳು, ಸಂಸ್ಕೃತ ಪಂಡಿತರು, ತುಳು ಬ್ರಾಹ್ಮಣರ ನೆರವಿನಿಂದ, ತುಳುನಾಡಿನ ಇತಿಹಾಸ ಕಟ್ಟಲು ಪ್ರಾರಂಭಿಸಿದರು. ಈ ಕುರಿತು ಅವರು ಮೆಕೆಂಜಿ, ಗೋವಿಂದ ಪೈ, ಸೇಡಿಯಾಪು ಕೃಷ್ಣ ಭಟ್, ಬಿ.ಎ. ವಿವೇಕ ರೈ, ಪೀಟರ್ ಕ್ಲಾಸ್ ಮುಂತಾದ ವಿದ್ವಾಂಸರ ಕೆಲಸಗಳನ್ನು ಉಲ್ಲೇಖಿಸುತ್ತಾರೆ. ಇದಕ್ಕೆ ಸ್ಥಳೀಯ ಸ್ಥಳನಾಮಗಳು, ಐತಿಹಾಸಿಕ ಘಟನೆಗಳು, ಮತ್ತು ವೈವಿಧ್ಯಮಯ ಆಕರಗಳನ್ನು ಸೇರಿಸಿ, ಈ ವಿದ್ವಾಂಸರು ತುಳುನಾಡಿನ ಪರಿಕಲ್ಪನೆಯನ್ನು ವಿಸ್ತರಿಸುವ ಜೊತೆಗೆ ತುಳು ಭಾಷೆಗೆ ಅಧಿಕೃತತೆಯನ್ನು ನೀಡುತ್ತಾರೆ.

ಗೋವಿಂದ ಪೈ ಅವರ ವಿಶ್ಲೇಷಣೆ ಪ್ರಕಾರ, 'ತುಳ್ಯೆ' ಎಂಬುದಕ್ಕೆ "ನೀರಿನಲ್ಲಿ ಹುಟ್ಟು ಹಾಕುವುದು" ಅಥವಾ "ನೀರಿನಲ್ಲಿ ಆಟವಾಡುವುದು" ಎಂಬ ಅರ್ಥವಿದೆ. ಈ ಆಧಾರದ ಮೇಲೆ, ನೀರಿನ ಮಹತ್ವವು ತುಳುವ ಸಂಸ್ಕೃತಿಯ ಕೇಂದ್ರಬಿಂದು ಎಂದು ಲೇಖಕ ಸ್ಪಷ್ಟಪಡಿಸುತ್ತಾರೆ. ಅವರು ಭಾಷೆಯ ಮತ್ತು

ಸಂಸ್ಕೃತಿಯ ಪರಸ್ಪರ ಸಂಬಂಧವನ್ನು ಬಿಂಬಿಸುವ ಮೂಲಕ, ಪ್ರದೇಶದ ಇತಿಹಾಸ ಮತ್ತು ಸಂಸ್ಕೃತಿಯನ್ನು ಆಳವಾಗಿ ಅಧ್ಯಯನ ಮಾಡಿತ್ತಾರೆ.

**ತುಳು ಲಿಪಿಯ ಕುರಿತು ವಿಶ್ಲೇಷಣೆ**

ಭಾಷೆಯ ವಿಷಯವಾಗಿ ಪುರುಷೋತ್ತಮ ಬಿಳಿಮಲೆ ತುಳು ಲಿಪಿಯ ಮೂಲವನ್ನು ತಮಿಳು ಬ್ರಾಹ್ಮಿ ಲಿಪಿಯಿಂದ ಬಂದಿರಬಹುದೆಂಬ ಅಭಿಪ್ರಾಯವನ್ನು ಹೊರಹಾಕುತ್ತಾರೆ. ಆದರೆ, ಉಡುಪಿಯ ಮಠಗಳಲ್ಲಿ ತುಳು ಲಿಪಿಯ ಬಳಕೆಯ ಉಲ್ಲೇಖಗಳು ಇದ್ದರೂ, ಆ ಲಿಪಿಯನ್ನು ಪ್ರಚಾರಕ್ಕೆ ತರುವಲ್ಲಿ ಮಠಗಳು ಏಕೆ ಹಿಂದೇಟು ಹಾಕಿದವು ಎಂಬ ಪ್ರಶ್ನೆಯನ್ನು ಮಾಡುತ್ತಾ ತುಳು ಭಾಷೆಗೆ ಒದಗಬೇಕಾದ ಆದ್ಯತೆಯನ್ನು ಗುರುತಿಸುತ್ತಾರೆ. ಈ ಮೂಲಕ 'ತುಳು ಭಾಷೆಗೆ ಸಂವಿಧಾನದ ಮಾನ್ಯತೆ' ಗೆ ಸಂಬಂಧಿಸಿದಂತೆ ತಮಿಳು ಸಂಗಂ ಸಾಹಿತ್ಯದಲ್ಲಿ ಕಂಡುಬರುವ ಕೋಶರ್ ಜನಾಂಗದ ಉಲ್ಲೇಖಗಳು, ತುಳು ಭಾಷೆಯ ಇತಿಹಾಸವನ್ನು 800 ವರ್ಷಗಳ ಹಿಂದೆ ನಿಲ್ಲಿಸುತ್ತವೆ ಎಂಬ ಆಧಾರವನ್ನು ಉಲ್ಲೇಖಿಸುತ್ತಾರೆ. ಈ ಚಾರಿತ್ರಿಕ ಮಹತ್ವವನ್ನು ಪರಿಗಣಿಸಿದರೂ, ಭಾರತೀಯ ಸಂವಿಧಾನವು ತುಳು ಭಾಷೆಗೆ ಮಾನ್ಯತೆ ನೀಡದಿರುವುದಕ್ಕೆ ಅವರು ಬೇಸರ ವ್ಯಕ್ತಪಡಿಸುತ್ತಾರೆ. ಪುರುಷೋತ್ತಮ ಬಿಳಿಮಲೆ, ತುಳು ಭಾಷೆ, ಅದರ ಪರಂಪರೆ, ಮತ್ತು ಸಂಸ್ಕೃತಿಯ ಗಾಢ ವಿಷಯಗಳನ್ನು ಚರ್ಚೆಗೊಳಪಡಿಸುವ ಮೂಲಕ, ಅಧ್ಯಯನಕ್ಕೆ ಹೊಸ ದಿಕ್ಕು ನೀಡುತ್ತಾರೆ. ತುಳುನಾಡಿನ ಬಗ್ಗೆ ವಿಶೇಷ ಅಧ್ಯಯನ ಮತ್ತು ಸಂಶೋಧನೆಯ ಅಗತ್ಯವನ್ನು ಅವರು ಜಾಗೃತಗೊಳಿಸುತ್ತಾರೆ, ಇದು ಭಾಷಾ–ಸಾಂಸ್ಕೃತಿಕ ಪರಿಕಲ್ಪನೆಗಳನ್ನು ಮತ್ತಷ್ಟು ಸಮೃದ್ಧಗೊಳಿಸಲು ನೆರವಾಗುತ್ತಾರೆ.

ಪುರುಷೋತ್ತಮ ಬಿಳಿಮಲೆ ಅವರು ತಮ್ಮ ಬರಹದಲ್ಲಿ ಕರ್ನಾಟಕ ಜಾನಪದ ಅಧ್ಯಯನಗಳ ಮಾದರಿಗಳನ್ನು ಮರು ವಿಶ್ಲೇಷಣೆಯನ್ನು ಮಾಡುತ್ತಾರೆ. ಈ ಮೂಲಕ ತಮ್ಮ ಬರಹದಲ್ಲಿ ಜಾನಪದ ಸಂಸ್ಕೃತಿ, ಸಿದ್ಧಾಂತಗಳು, ಮತ್ತು ಅಧ್ಯಯನದ ಮಾರ್ಗಗಳನ್ನು ವಿಶ್ಲೇಷಿಸುತ್ತಾರೆ.

ಅಧ್ಯಯನಕ್ಕೆ ಬ್ರಿಟಿಷರ ನೇರ ಆಡಳಿತವು ಕರ್ನಾಟಕದ ಮೇಲೆ ಬಾಸೆಲ್ ಮಿಷನ್ ಮೂಲಕ ವಸಾಹತುಶಾಹಿ ಅನುಭವವನ್ನು ಸಾಹಿತ್ಯದ ನೆಲೆಯಲ್ಲಿ ಹೊರಹಾಕಿತು. ಈ ಪ್ರಭಾವ ಪಾಶ್ಚಿಮಾತ್ಯ ವೈಚಾರಿಕತೆಯ ಮೂಲಕ ಬದುಕಿನ ಎಲ್ಲಾ ಕ್ಷೇತ್ರಗಳನ್ನು ಒಳಗೊಂಡಂತೆ ಸಾಹಿತ್ಯವನ್ನು ಪ್ರವೇಶಿಸಿತು. ಬಿಳಿಮಲೆ, ಈ ಸಂಬಂಧವನ್ನು ಒತ್ತಿ ಹೇಳುತ್ತಾ, ಜನಪದ ವಿದ್ವಾಂಸರ ಅಧ್ಯಯನ ಮತ್ತು ಪ್ರಾಮಾಣಿಕತೆಯ ಮೂಲಕವಾಗಿ ಜನಪದದ ಸವಾಲುಗಳು ಮತ್ತು ಅಸಮಾನತೆಯ ಅಂಶವನ್ನು ನಿರೂಪಿಸುತ್ತಾರೆ.

ಜನಪದ ಅಧ್ಯಯನ ಎಂಬುದು ಅಂದಿನ ಕಾಲಕ್ಕೆ ಸಮಾಜದ ಅಸಮಾನತೆ, ಲಿಂಗ ಅಸಮಾನತೆ, ಮತ್ತು ಜನಪದ ನಿರೂಪಣೆಗಳ ಮೂಲಕ ಮೂಢನಂಬಿಕೆಗಳನ್ನು ಬಲಪಡಿಸಿದ ರೀತಿಯನ್ನು ಚರ್ಚಿಸುತ್ತಾರೆ. ಅದು ಜಾನಪದ ಹೆಸರಿನಲ್ಲಿ ನಡೆದ ಸಂಶೋಧನೆಗಳು ಈ ಮಾದರಿಯನ್ನು ಅನುಸರಿಸುತ್ತಿರುವುದಕ್ಕೆ ಬೇಸರವನ್ನು ವ್ಯಕ್ತಪಡಿಸುತ್ತಾರೆ. ಆದ್ದರಿಂದ ಮೂಢನಂಬಿಕೆಗಳ ಪ್ರತಿಪಾದನೆ ಮತ್ತು ಅವುಗಳ ಅನಗತ್ಯ ವೈಭವೀಕರಣವು ಅನೇಕ ಬಾರಿ ಹಿಂದುಳಿದವರ ಮುಕ್ತಿಗೆ ಮಾರಕವಾಗುತ್ತದೆ ಎಂಬ ವಿಚಾರನ್ನು ಮೂಡಿಸುತ್ತಾರೆ. ಈ ಮಾದರಿಯನ್ನು ಹೊರಗಿಟ್ಟು ಜನಪದ ಸಂಸ್ಕೃತಿ ಮತ್ತು ಅಧ್ಯಯನವು ಒಂದು ಭಾಷೆ ಮತ್ತು ಸಂಸ್ಕೃತಿಯ ನೆಲೆಯಲ್ಲಿನ ಸತ್ವವನ್ನು ಹುಡುಕಬೇಕು. ಹಾಗೆಯೇ ಇದರಲ್ಲಿ ಅಡಕವಾದ ಆಯಾಮಗಳು, ವೈವಿಧ್ಯತೆಯನ್ನು

ಒಳಗೊಂಡು, ಜಾನಪದ ಸಂಶೋಧನೆ ಮತ್ತು ಸಂಗ್ರಹಗಳು ಹೊಸ ರೀತಿಯಲ್ಲಿ ಪುನಃ ಪರಿಶೀಲನೆಗೆ ಒಳಗಾಗಬೇಕು ಎಂದು ಸಂಶೋಧನೆಯ ದೃಷ್ಟಿಯಲ್ಲಿ ತಮ್ಮ ಎಂಬ ಅಭಿಪ್ರಾಯವನ್ನು ತಿಳಿಸುತ್ತಾರೆ.

ಹೀಗೆ ವಸಾಹತು ಮಾದರಿಯ ಜನಪದ ಅಧ್ಯಯನವು ನೀಡಿದ ರೂಪವನ್ನು ಬದಲಾಯಿಸಲು ಹೊಸ ಮಾರ್ಗಗಳನ್ನು ಒದಗಿಸುತ್ತದೆ. ಜನಪದ ಸಂಸ್ಕೃತಿ ಮತ್ತು ಸಂಶೋಧನೆಗೆ ಒಳಗೊಳ್ಳುವ ಹೊಸ ಆದರ್ಶಗಳು, ಅದರ ವಿವಿಧ ಅಂಶಗಳನ್ನು ತಿಳಿಯಲು ಮತ್ತು ಇತಿಹಾಸವನ್ನು ಪುನರ್ ವ್ಯಾಖ್ಯಾನಿಸಲು ಸಾಧ್ಯವಾಗುತ್ತದೆ ಎಂದು ಪುರುಷೋತ್ತಮ ಬಿಳಿಮಲೆ ಅವರು ಸ್ಪಷ್ಟಪಡಿಸುತ್ತಾರೆ.

ಪುರುಷೋತ್ತಮ ಬಿಳಿಮಲೆ ಅವರು ತಮ್ಮ ಬರಹದಲ್ಲಿ ಕರ್ನಾಟಕ ಜಾನಪದ ಅಧ್ಯಯನಗಳ ಮಾದರಿಗಳನ್ನು ಮರು ವಿಶ್ಲೇಷಣೆಯನ್ನು ಮಾಡುತ್ತಾರೆ. ಈ ಮೂಲಕ ತಮ್ಮ ಬರಹದಲ್ಲಿ ಜಾನಪದ ಸಂಸ್ಕೃತಿ, ಸಿದ್ಧಾಂತಗಳು, ಮತ್ತು ಅಧ್ಯಯನದ ಮಾರ್ಗಗಳನ್ನು ವಿಶ್ಲೇಷಿಸುತ್ತಾರೆ.

ಅಧ್ಯಯನಕ್ಕೆ ಬ್ರಿಟಿಷರ ನೇರ ಆಡಳಿತವು ಕರ್ನಾಟಕದ ಮೇಲೆ ಬಾಸೆಲ್ ಮಿಷನ್ ಮೂಲಕ ವಸಾಹತುಶಾಹಿ ಅನುಭವವನ್ನು ಸಾಹಿತ್ಯದ ನೆಲೆಯಲ್ಲಿ ಹೊರಹಾಕಿತು. ಈ ಪ್ರಭಾವ ಪಾಶ್ಚಿಮಾತ್ಯ ವೈಚಾರಿಕತೆಯ ಮೂಲಕ ಬದುಕಿನ ಎಲ್ಲಾ ಕ್ಷೇತ್ರಗಳನ್ನು ಒಳಗೊಂಡಂತೆ ಸಾಹಿತ್ಯವನ್ನು ಪ್ರವೇಶಿಸಿತು. ಬಿಳಿಮಲೆ, ಈ ಸಂಬಂಧವನ್ನು ಒತ್ತಿ ಹೇಳುತ್ತಾ, ಜನಪದ ವಿದ್ವಾಂಸರ ಅಧ್ಯಯನ ಮತ್ತು ಪ್ರಾಮಾಣಿಕತೆಯ ಮೂಲಕವಾಗಿ ಜನಪದದ ಸವಾಲುಗಳು ಮತ್ತು ಅಸಮಾನತೆಯ ಅಂಶವನ್ನು ನಿರೂಪಿಸುತ್ತಾರೆ.

ಜನಪದ ಅಧ್ಯಯನ ಎಂಬುದು ಅಂದಿನ ಕಾಲಕ್ಕೆ ಸಮಾಜದ ಅಸಮಾನತೆ, ಲಿಂಗ ಅಸಮಾನತೆ, ಮತ್ತು ಜನಪದ ನಿರೂಪಣೆಗಳ ಮೂಲಕ ಮೂಢನಂಬಿಕೆಗಳನ್ನು ಬಲಪಡಿಸಿದ ರೀತಿಯನ್ನು ಚರ್ಚಿಸುತ್ತಾರೆ. ಅದು ಜಾನಪದ ಹೆಸರಿನಲ್ಲಿ ನಡೆದ ಸಂಶೋಧನೆಗಳು ಈ ಮಾದರಿಯನ್ನು ಅನುಸರಿಸುತ್ತಿರುವುದಕ್ಕೆ ಬೇಸರವನ್ನು ವ್ಯಕ್ತಪಡಿಸುತ್ತಾರೆ. ಆದ್ದರಿಂದ ಮೂಢನಂಬಿಕೆಗಳ ಪ್ರತಿಪಾದನೆ ಮತ್ತು ಅವುಗಳ ಅನಗತ್ಯ ವೈಭವೀಕರಣವು ಅನೇಕ ಬಾರಿ ಹಿಂದುಳಿದವರ ಮುಕ್ತಿಗೆ ಮಾರಕವಾಗುತ್ತದೆ ಎಂಬ ವಿಚಾರನ್ನು ಮೂಡಿಸುತ್ತಾರೆ. ಈ ಮಾದರಿಯನ್ನು ಹೊರಗಿಟ್ಟು ಜನಪದ ಸಂಸ್ಕೃತಿ ಮತ್ತು ಅಧ್ಯಯನವು ಒಂದು ಭಾಷೆ ಮತ್ತು ಸಂಸ್ಕೃತಿಯ ನೆಲೆಯಲ್ಲಿನ ಸತ್ವವನ್ನು ಹುಡುಕಬೇಕು. ಅಗೆಯೇ ಇದರಲ್ಲಿ ಅಡಕವಾದ ಆಯಾಮಗಳು, ವೈವಿಧ್ಯತೆಯನ್ನು ಒಳಗೊಂಡು, ಜಾನಪದ ಸಂಶೋಧನೆ ಮತ್ತು ಸಂಗ್ರಹಗಳು ಹೊಸ ರೀತಿಯಲ್ಲಿ ಪುನಃ ಪರಿಶೀಲನೆಗೆ ಒಳಗಾಗಬೇಕು ಎಂದು ಸಂಶೋಧನೆಯ ದೃಷ್ಟಿಯಲ್ಲಿ ತಮ್ಮ ಅಭಿಪ್ರಾಯವನ್ನು ತಿಳಿಸುತ್ತಾರೆ.

ಹೀಗೆ ವಸಾಹತು ಮಾದರಿಯ ಜನಪದ ಅಧ್ಯಯನವು ನೀಡಿದ ರೂಪವನ್ನು ಬದಲಾಯಿಸಲು ಹೊಸ ಮಾರ್ಗಗಳನ್ನು ಒದಗಿಸುತ್ತದೆ. ಜನಪದ ಸಂಸ್ಕೃತಿ ಮತ್ತು ಸಂಶೋಧನೆಗೆ ಒಳಗೊಳ್ಳುವ ಹೊಸ ಆದರ್ಶಗಳು, ಅದರ ವಿವಿಧ ಅಂಶಗಳನ್ನು ತಿಳಿಯಲು ಮತ್ತು ಇತಿಹಾಸವನ್ನು ಪುನರ್ ವ್ಯಾಖ್ಯಾನಿಸಲು ಸಾಧ್ಯವಾಗುತ್ತದೆ ಎಂದು ಪುರುಷೋತ್ತಮ ಬಿಳಿಮಲೆ ಅವರು ಸ್ಪಷ್ಟಪಡಿಸುತ್ತಾರೆ.

ತಮ್ಮ ಲೇಖನದಲ್ಲಿ ಜಾತೀಯತೆ, ಕೋಮುವಾದ ಮತ್ತು ಜನಸಂಸ್ಕೃತಿ ಬಗ್ಗೆ ವಿಚಾರವನ್ನು ಮಾಡುತ್ತಾರೆ. ಜನರು, ದೇಶಿಯತೆಯನ್ನು ವೈವಿಧ್ಯತೆಯನ್ನು ಮರೆತು, ತೀವ್ರತೆಯ ಜಾತಿಯ ಅಸಹನೆ ಮತ್ತು ಧರ್ಮದ ಆಧಾರದ ಮೇಲೆ ದ್ವೇಷವನ್ನು ಮುಟ್ಟಿಸುತ್ತಿದ್ದಾರೆ. ಇದಕ್ಕೆ ರಾಜಕೀಯವು ಜನಮನಗಳಲ್ಲಿ

ಉಂಟುಮಾಡುತ್ತಿರುವ ಗೊಂದಲವೇ ಪ್ರಮುಖ ಕಾರಣವೆಂದು ಅಭಿಪ್ರಾಯಿಸುತ್ತಾರೆ. ಇಂತಹ ಬೆಳವಣಿಗೆಗಳು ಸಂಸ್ಕೃತಿಯನ್ನು ನಾಶದತ್ತ ಮುನ್ನಡೆಯುವ ಪರಿಸ್ಥಿತಿಗೆ ಪ್ರೇರಕವಾಗಿದೆ ಎಂದು ಬೇಸರವನ್ನು ವ್ಯಕ್ತಪಡಿಸುತ್ತಾರೆ.

ಮುಸ್ಲಿಂ ಸಂಸ್ಕೃತಿಯ ಅಂಶಗಳಾದ ರಂಜಾನ್ ಪದ್ಯಗಳಲ್ಲಿ ಎಳೆಯ ವಯಸ್ಸಿನಲ್ಲಿ ಸತ್ತು ಹೋದ ಅಗಸರನ್ನು ಅಭಿಮನ್ಯುವಿಗೆ ಹೋಲಿಸಲಾಗಿದೆ ಚಿತ್ರಣ ಅಥವಾ ತುಳುನಾಡಿನಲ್ಲಿ ಮುಸ್ಲಿಂ ನಾಯಕರು ಭೂತಾರಾಧನೆಗೆ ಸೇರಿಕೊಂಡು ಸಮನ್ವಯ ಸಾಧಿಸಿದ ಬೊಬ್ಬರ್ಯ ಕಥೆ, ಇವುಗಳು ವಿಭಿನ್ನ ಧಾರ್ಮಿಕ ಸಮುದಾಯಗಳ ಏಕತೆಯ ಜನಪದದ ಉದಾಹರಣೆಯನ್ನು ನೀಡುತ್ತಾರೆ. ಈ ಮೂಲಕ ಧರ್ಮದ ಹೆಸರಿನಲ್ಲಿ ನಡೆಯುತ್ತಿರುವ ಅರಾಜಕತೆಯನ್ನು ಅವರು ಖಂಡಿಸುತ್ತಾರೆ. ಇದಕ್ಕೆ ಚಿಕಿತ್ಸಕ ರೀತಿಯಲ್ಲಿ ಸಮಾನತೆ ಮತ್ತು ಸಂಸ್ಕೃತಿಯ ಪ್ರತೀಕಗಳನ್ನು ಮೆರೆಸುವ ಇತಿಹಾಸವನ್ನು ನೆನಪಿಸಿಕೊಳ್ಳುವ ಅಗತ್ಯವಿದೆ ಎಂದು ಒತ್ತಿಹೇಳುತ್ತಾರೆ. ಈ ಮೂಲಕ ಸಂಸ್ಕೃತಿಯ ಹೆಸರಿನಲ್ಲಿ ಸಮಾಜದ ಒಳಗಡೆ ನಡೆಯುತ್ತಿರುವ ಗಂಭೀರ ಬದಲಾವಣೆಗಳಿಗೆ ಜನರಲ್ಲಿ ಅರಿವು ಮೂಡಿಸಬೇಕೆಂಬುದೇ ತಮ್ಮ ಅಂಕಣ ಬರಹಗಳಲ್ಲಿ ವಿವರಿಸುತ್ತಾರೆ.

ಮುಂದೆ ಸಂಸ್ಕೃತಿಯ ವಿಭಿನ್ನ ರೂಪಗಳನ್ನು ದಾಖಲಿಸುವಾಗ ತಮಿಳುನಾಡಿನ ಕೊಯಂಬತ್ತೂರು ಸಮೀಪ ನಡೆಯುವ ಅರವನ್ ಜಾತ್ರೆಯ ವಿಶಿಷ್ಟತೆಗಳನ್ನು ವಿವರಿಸುತ್ತಾರೆ. ಈ 18 ದಿನಗಳ ಜಾತ್ರೆಯು ಅರವನ್‌ನ ಪಾತ್ರ ಸ್ಮರಣೆಗೊಳಿಸುತ್ತದೆ. ಜಾತ್ರೆಯಲ್ಲಿ ಉಭಯಲಿಂಗಿಗಳು ಅರವನ್‌ನ್ನು ಮದುವೆಯಾಗಲು ಬಂದು ಸಂಭ್ರಮಿಸುತ್ತಾರೆ, ಈ ಆಚರಣೆಯ ಅಂತಿಮ ದಿನದಲ್ಲಿ ಅರವನ್ ಕಾಳಿಗೆ ಬಲಿಯಾಗುತ್ತಾನೆ, ಅಷ್ಟೇ ಅಲ್ಲದೆ, ಉಭಯಲಿಂಗಿಯರು ವಿಧವೆಯರಾಗಿ ಬದಲಾಗುತ್ತಾರೆ. ಅರವನ್‌ನ ಹುಟ್ಟಿನ ಕಥೆ ಮಹಾಭಾರತದ ಪಾತ್ರದ ಉಲುಪಿಯ ಮಗನಾಗಿ ಪ್ರಸ್ತಾಪವಾಗುತ್ತದಾದರೂ, ಈ ಕಾವ್ಯದ ಬಗ್ಗೆ ಸ್ಥಳೀಯವಾಗಿ ಅನೇಕ ವಿಭಿನ್ನ ಆವೃತ್ತಿಗಳನ್ನು ರೂಪಿಸಿಕೊಂಡಿವೆ. ಕೃಷ್ಣ ಮೋಹಿನಿ ರೂಪದಲ್ಲಿ ಅವನನ್ನು ಮದುವೆಯಾಗುವ ಕಥೆಯು, ಪತಿ ಸತ್ತಾಗ ಮಹಿಳೆಯರು ಕುಂಕುಮ ಅಳಿಸುವ ಮತ್ತು ಬಳೆ ಒಡೆಯುವ ಕಾರ್ಯವನ್ನು ದೃಶ್ಯಾತ್ಮಕವಾಗಿ ಒಳಗೊಂಡಿದೆ. ಈ ಆಚರಣೆಯನ್ನು ಸವದತ್ತಿ ಎಲ್ಲಮ್ಮ ಜಾತ್ರೆಯೊಂದಿಗೆ ಹೋಲಿಸುತ್ತಾರೆ. ಕೆಲವೊಮ್ಮೆ ಪೌರಾಣಿಕ ಕಥಾನಕಗಳು ಮತ್ತು ಸಾಮಾಜಿಕ ಆಚರಣೆಗಳು ಏಕಕಾಲದಲ್ಲಿ ಮಾನವೀಯ ಮತ್ತು ದೈವಿಕ ಮಟ್ಟವನ್ನು ಸಮೀಕರಿಸುತ್ತವೆ. ಮನುಷ್ಯನ ಕಷ್ಟಗಳು ಮತ್ತು ನೋವುಗಳು ದೈವಕಥೆಗಳಲ್ಲಿ ಕೂಡ ಸ್ಪಷ್ಟವಾಗಿ ಮೂಡಿವೆ, ಎಂಬುದನ್ನು ಈ ಸಂಸ್ಕೃತಿಯ ರೂಪಕಗಳು ಉಲ್ಲೇಖಿಸುತ್ತವೆ.

ಈ ಲೇಖನದಲ್ಲಿ ಉಭಯಲಿಂಗಿಗಳನ್ನು ಸಮಾಜದಲ್ಲಿ ಅವರು ನಡೆಸಿಕೊಳ್ಳುವ ಸಾಮಾನ್ಯ ರೀತಿಗೆ ಹೋಲಿಸಿದರೆ ವಿಭಿನ್ನವಾಗಿ ಮೇಲೆರಿಸಿರುವುದು ಕಾಣುತ್ತದೆ. ಮೋಹಿನಿ ವೇಷ ಧರಿಸಿ ಮದುವೆಯಾದ ಹೆಣ್ಣು, ಪತಿ ಸತ್ತಾಗ ಕುಂಕುಮ ಅಳಿಸಿ ಬಳೆ ಒಡೆದು ವಿಧವೆ ಆಗುವ ಪ್ರಸಂಗವು ಮನುಷ್ಯ ಮತ್ತು ದೈವವನ್ನು ಸಮೀಕರಿಸಿ ನೋಡುವ ವೈಚಾರಿಕತೆಯನ್ನು ತೋರಿಸುತ್ತದೆ. ಈ ಸಂಕಟವು ಕೇವಲ ಮನುಷ್ಯನದೇ ಅಲ್ಲ, ದೈವವೂ ಕೂಡ ಕಷ್ಟ, ಸಮಸ್ಯೆಗಳಿಗೆ ಒಳಗಾಗುತ್ತದೆ ಎಂಬ ಭಾವನೆಗೆ ಬೆಳಕು ಚೆಲ್ಲುತ್ತದೆ. ಈ ಮೂಲಕ ಮನುಷ್ಯನ ದುಃಖಗಳನ್ನು ತೆರೆಮರೆಗೆ ಸರಿಸುವ ಆಲೋಚನೆಯಾಗಿಯೂ

ಜನಪದರಲ್ಲಿ ಮೂಡಿಬಂದಿರುವುದು ಸ್ಪಷ್ಟವಾಗುತ್ತದೆ. ಹೀಗೆ "ಬಹುರೂಪ" ಕೃತಿಯಲ್ಲಿ ವೈಚಾರಿಕತೆ, ಭಾಷೆ, ಸಂಸ್ಕೃತಿ ಮತ್ತು ಮಾನವತಾವಾದದ ನೆಲೆಯಲ್ಲಿ ಹಲವಾರು ಅಂಕಣ ಬರಹಗಳನ್ನು ರಚಿಸಿರುವ ಪುರುಷೋತ್ತಮ ಬಿಳಿಮಲೆಯವರ ಕಾರ್ಯ ಶ್ಲಾಘನೀಯವಾಗಿದೆ.

**ಆಕರ ಗ್ರಂಥ**


- ಪುರುಷೋತ್ತಮ ಬಿಳಿಮಲೆ. (2013). *ಬಹುರೂಪ.* ಯಾಜಿ ಪ್ರಕಾಶನ.


**ಪರಾಮರ್ಶನ ಗ್ರಂಥಗಳು**


- ಅಗ್ರಹಾರ ಕೃಷ್ಣಮೂರ್ತಿ. (ಸಂ.) (2006). *ಸಂಸ್ಕೃತಿ ಕಥನ.* ಕನ್ನಡ ಮತ್ತು ಸಂಸ್ಕೃತಿ ಇಲಾಖೆ.
- ಅರವಿಂದ ಮಾಲಗತ್ತಿ. (2014). *ಸಾಹಿತ್ಯ ಸಂಸ್ಕೃತಿ ಮತ್ತು ದಲಿತ ಪ್ರಜ್ಞೆ.* ಕನ್ನಡ ಸಾಹಿತ್ಯ ಪರಿಷತ್ತು.
- ಮೋಹನ್ ಕೃಷ್ಣ ರೈ ಕೆ. (2004). *ಪ್ರಭುತ್ವ ಮತ್ತು ಜನತೆ.* ಕನ್ನಡ ವಿಶ್ವವಿದ್ಯಾಲಯ.